# ಎನ್‌ಐಟಿಕೆಯಲ್ಲಿ ಸರ್ಚ್ ಅನಾವರಣ

**ಅತ್ಯಾಧುನಿಕ ತುರ್ತು ಪ್ರತಿಕ್ರಿಯೆ ಕೇಂದ್ರ**

■ **ವಿಕ ಸುದ್ದಿಲೋಕ** ಸುರತ್ಕಲ್

ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ದಲ್ಲಿ ಅತ್ಯಾಧುನಿಕ ತಂತ್ರಜ್ಞಾನವನ್ನೊಳಗೊಂಡ ತುರ್ತು ಸಹಾಯ, ಪ್ರತಿಕ್ರಿಯೆ ಮತ್ತು ಸಂವಹನ ಕೇಂದ್ರ(ಸರ್ಚ್) ಸೋಮವಾರದಿಂದ ಕಾರ್ಯಾರಂಭ ಮಾಡಿದೆ.

ಎನ್‌ಐಟಿಕೆ ಸುರತ್ಕಲ್‌ನಲ್ಲಿರುವ ಸೆಂಟರ್ ಫಾರ್ ಸಿಸ್ಟಮ್ ಡಿಸೈನ್ ನೇತೃತ್ವದಲ್ಲಿ ಮಾರ್ಪಾಟಾದ ಈ ಕೇಂದ್ರವು ಸ್ವಾಯತ್ತ ಸಾಗರ ನೌಕೆಗಳು, ವೈಮಾನಿಕ ವಾಹನಗಳು ಮತ್ತು ಹವ್ಯಾಸಿ ರೇಡಿಯೊ ಕೇಂದ್ರಗಳನ್ನು ಏಕಕಾಲದಲ್ಲಿ ಸಂಯೋಜಿಸುವ ಮೂಲಕ ವಿಪತ್ತು ನಿರ್ವಹಣೆ, ತುರ್ತು ಪ್ರತಿಕ್ರಿಯೆ ಮತ್ತು ಸಂವಹನ ವ್ಯವಸ್ಥೆಗಳಿಗೆ ಕ್ರಾಂತಿಕಾರಿ ವಿಧಾನವಾಗಿ ಪರಿಣಮಿಸಿದೆ. ಹವ್ಯಾಸಿ ರೇಡಿಯೋ ಕಾರ್ಯಾಚರಣೆಗಳನ್ನು ಮಂಗಳೂರು ಹವ್ಯಾಸಿ ರೇಡಿಯೋ ಕ್ಲಬ್ ಸಹಕಾರದೊಂದಿಗೆ, ತುರ್ತು ಸಂದರ್ಭಗಳಲ್ಲಿ ಪರಿಣಾಮಕಾರಿ ಸಂವಹನವನ್ನು ಸಾಧಿಸುವ ಮಾಧ್ಯಮವನ್ನು ಕಲ್ಪಿಸಲಾಗಿದೆ.

ಇದಲ್ಲದೆ ಕರಾವಳಿ ನಿಯಂತ್ರಣ ವಲಯದ ಉನ್ನತಾಧಿಕಾರಿಗಳು ಸಹ ಈ ಕೇಂದ್ರದಲ್ಲಿನ ಅತ್ಯಾಧುನಿಕ ಯಂತ್ರಗಳ ಸಹಾಯದಿಂದ ಕಡಲ್ಕೊರೆತದ ಅಧ್ಯಯನ ನಡೆಸುತ್ತಿದ್ದಾರೆ.



ವಿಪತ್ತು ಪ್ರತಿಕ್ರಿಯೆಗಾಗಿ ವಿನ್ಯಾಸಗೊಳಿಸಿದ್ದರೂ, ಈ ಕೇಂದ್ರವು ಇನ್ನಿತರ ಅನೇಕ ಕ್ಷೇತ್ರಗಳಲ್ಲಿಯೂ ಕಾರ್ಯ ನಿರ್ವಹಿಸುತ್ತದೆ. ವಿಶೇಷವಾಗಿ ಈ ಭಾಗದ ನೀರು ಮತ್ತು ಗಾಳಿಯ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡುವುದು, ಕಡಲ್ಕೊರೆತದ ಮಾದರಿಗಳನ್ನು ವಿಶ್ಲೇಷಿಸುವುದು ಮತ್ತು ಕಡಲ ತೀರದ ಮ್ಯಾಂಗ್ರೋವ್‌ಗಳ ಕಾಲಕಾಲಿಕ ಬೆಳವಣಿಗೆಗಳನ್ನು ಪರಿಶೀಲಿಸುವಲ್ಲಿಯೂ ಸಹಕಾರಿಯಾಗಿದೆ.

ವೃತ್ತಿಪರರು, ಜಿಲ್ಲಾ ಆಡಳಿತಗಾರರು, ಶಿಕ್ಷಣ ತಜ್ಞರು, ವಿದ್ಯಾರ್ಥಿಗಳು ಮತ್ತು ಹವ್ಯಾಸಿ ರೇಡಿಯೋ ಉತ್ಸಾಹಿಗಳನ್ನು ಒಳಗೊಂಡಂತೆ ಅನೇಕ ಮಂದಿಗೆ ಸರ್ಚ್ ಉಪಯುಕ್ತವಾಗಿದೆ.

ಸರ್ಚ್‌ನ ಮುಖ್ಯಸ್ಥ ಮತ್ತು ಟ್ರಾನ್ಸ್‌ಡಿಸಿಪ್ಲಿನರಿ ಆರ್‌ಡಿ ಪ್ರಭಾರಿ ಪ್ರೊಫೆಸರ್ ಡಾ. ಪೃಥ್ವಿರಾಜ್ ಯು., ಸರ್ಚ್‌ನ ಪರಿಕಲ್ಪನೆ ಮತ್ತು ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರೊ. ಕೆ. ವಿ. ಗಂಗಾಧರನ್, ಡಾ. ಮೋಹಿತ್ ಪಿ. ತಾಹಿಲಿಯಾನಿ ಮತ್ತು ಡಾ. ಶ್ರೀವಲ್ಸಾ ಕೊಲತಾಯರ್ ಸೇರಿದಂತೆ ಇತರ ಪ್ರಮುಖ ಅಧ್ಯಾಪಕರು, ಎನ್‌ಐಟಿಕೆ ಹಳೆ ವಿದ್ಯಾರ್ಥಿಗಳು, ಸರ್ಚ್ ಕೇಂದ್ರ ನಿರ್ಮಾಣಕ್ಕೆ ತಮ್ಮ ಉದಾರ ದೇಣಿಗೆ ನೀಡಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ. ಬಿ. ರವಿ, 1983ನೇ ವರ್ಷದ ಹಳೆ ವಿದ್ಯಾರ್ಥಿ ಶ್ರೀರಂಗನ್ ರಾಮಸ್ವಾಮಿ ಮತ್ತು 1971ನೇ ವರ್ಷದ ಸೋನಾ ಗ್ರೂಪ್‌ನ ಅಧ್ಯಕ್ಷ ಯಜ್ಞನಾರಾಯಣ ಕಮ್ಮಾಜೆ, ಎನ್‌ಸಿಸಿ ಕಚೇರಿಯ ಅಧಿಕಾರಿ ಕಮಾಂಡಿಂಗ್ ಕರ್ನಲ್ ಅನಿಲೇಶ್ ಕೌಶಿಕ್, ಹಳೆ ವಿದ್ಯಾರ್ಥಿಗಳಾದ ರಾಮ್ ಭಂಡಾರೆ, ಎ.ಎಸ್. ಕಾರಂತ್ ಮತ್ತಿತರರಿದ್ದರು.

Vijaya Karnataka, Date: 14/12/23, p.no - 03 _ Nam Kudla